ದಿನಾಂಕ ಃ ೨೦-೭-೨೦೧೫ ರಂದು ಸಾಕ್ಷಿಯನ್ನು ಕರೆಸಿದೆ, ಪ್ರಮಾಣ ಮಾಡಿಸಿದೆ.

ಪಾಟೀ ಸವಾಲು ವಾದಿ ಪರ ಶ್ರೀ.ಎನ್‌ಕೆಎಸ್. ವಕೀಲರಿಂದ ಃ-

ವಾದಿ ಹಾಕಿದ ದಾವಾ ಪತ್ರವನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನ್ಯಾಯಾಲಯದಲ್ಲಿರುವ ಸಿದ್ದಪ್ಪ ಪರತಿವಾದಿ ೨ ಎಂದರೆ ನಿಜ. ಅವರ ಅಣ್ಣನೇ ಸಿದ್ದರಾಮನಗೌಡ ಎಂದರೆ ನಿಜ ಪ್ರತಿವಾದಿ ನಂ. ೧. ೧ ನೇ ಪ್ರತಿವಾದಿಯಿಂದ ನಾನು ಆಸ್ತಿ ಖರೀದಿ ಮಾಡಿದ್ದೇನೆ. ೧ ನೇ ಪ್ರತಿವಾದಿಯ ತಂದೆ ಹೆಸರು ಗೌಡರ ಬಸಪ್ಪ, ಖರೀದಿ ಪತ್ರದಲ್ಲಿ ಚನ್ನಬಸಪ್ಪ ಇವರ ಮಗನಾದ ಸುಮಾರು ೪೫ ವರ್ಷ ವಯಸ್ಸಿನವನಾದ ನಾನು ಸಿದ್ದರಾಮನಗೌಡ ಎಂದು ಬರೆಸಿದ್ದಾರೆಂದರೆ ನಿಜ. ಅದನ್ನು ನಿಡಿ. ೩೨ ಎಂದು ಗುರುತು ಮಾಡಲಾಗಿದೆ ಎಂದರೆ ನಿಜ. ಆ ಆಸ್ತಿಗೆ ಯಾರು ವಾರಸುದಾರರು ಇದ್ದಾರೆನ್ನುವುದನ್ನು ನಾನು ವಿಚಾರೆ ಮಾಡಿದ್ದೇನೆ. ೧ ನೇ ಪ್ರತಿವಾದಿ ತಂದೆಗೆ ೩ ಜನ ಅಣ್ಣತಮ್ಮಂದಿರು ಎಂದರೆ ನಿಜ. ೧ ನೇ ಪ್ರತಿವಾದಿ ದೊಡ್ಡಪ್ಪನ ಹೆಸರು ಗೌಡರ ಚನ್ನಬಸಪ್ಪ, ೩ ಜನ ಮಕ್ಕಳ ಪೈಕಿ ಗೌಡರ ಸಿದ್ದರಾಮಪ್ಪ , ಗೌಡರ ಚನ್ನಬಸಪ್ಪ ಮತ್ತು ಗೌಡರ ಬಸಪ್ಪ ಇರುತ್ತಾರೆ, ಗೌಡರ ಸಿದ್ದರಾಮಪ್ಪನನ್ನು ನಾನು ನೋಡಿಲ್ಲ, ಗೌಡರ ಚನ್ನಬಸಪ್ಪನನ್ನು ನೋಡಿದ್ದೇನೆ. ಗೌಡರ ಬಸಪ್ಪನನ್ನು ನಾನು ನೋಡಿಲ್ಲ, ಗೌಡರ ಚನ್ನಬಸಪ್ಪನಿಗೆ ಮಕ್ಕಳು ಇರಲಿಲ್ಲ ಎಂದರೆ ನಿಜ. ೧ ನೇ ಪ್ರತಿವಾದಿ ನಾನು ಚನ್ನಬಸಪ್ಪನ ಮಗ ಎಂದು ನಿಡಿ. ೩೨ ನ್ನು ಬರೆದುಕೊಟ್ಟಿದ್ದಾರೆಂದರೆ ನಿಜ. ೧ ನೇ ಪರತಿವಾದಿಗೆ ಮಾರಾಟ ಮಾಡಲು ಯಾವುದೇ ಹಕ್ಕು ಇರಲಿಲ್ಲ , ನಾನು ಖರೀದಿ ಮಾಡಲು ನನಗೂ ಕೂಡ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ, ಅವು ಜಂಟಿ ಕುಟುಂಬದ ಆಸ್ತಿಗಳು ಎಂದು ಗೊತ್ತಿದ್ದರೂ ನಾನು ಖರೀದಿ ಮಾಡಿದೆ ಎಂದರೆ ಸರಿಯಲ್ಲ, ನಾನು ಕಾನೂನು ಬಾಹಿರವಾಗಿ ಖರೀದಿ ಮಾಡಿದ್ದರಿಂದ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ, ದಾವಾ ಆಸ್ತಿಗಳ ಮೇಲೆ ಕಂದಾಯ ಇಲಾಖೆಯಲ್ಲಿ ಮೇಲ್ಮನವಿ ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ, ಆ ವಿಷಯ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ, ನನ್ನ ಪ್ರತಿವಾದ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ದಾವಾ ಆಸ್ತಿಗಳನ್ನು ಖರೀದಿ ಮಾಡಿ , ಸುಳ್ಳು ಪ್ರತಿವಾದ ಪತ್ರ ಹಾಕಿ ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಇದೆ,

ಹಿ.ಸಿ.ಜೆ. ಮತ್ತು ಜೆಎಂಎಫ್‌ಸಿ; ಕೂಡ್ಲಿಗಿ.